ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರ:585/2021

ಚಾಸಾ:1 ಪ್ರಾಸಾ:1

ದಿನಾಂಕ: 20.11.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ರಿಯಾಜ್ |
| ತಂದೆಯ ಹೆಸರು | : | ಸಯ್ಯದ್ ಬ್ಯಾರಿ |
| ವಯಸ್ಸು | : | 37 ವರ್ಷ |
| ಉದ್ಯೋಗ | : | ಚಾಲಕ |
| ವಾಸ ಸ್ಥಳ | : | ಗಂಗೊಳ್ಳಿ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ಆರೋಪಿಯ ಪರಿಚಯವಿಲ್ಲ. ಸುಮಾರು 3 ವರ್ಷಗಳ ಹಿಂದೆ ಮುಳ್ಳಿಕಟ್ಟೆ ಬಳಿ ಗುಂಪು ಗಲಾಟೆಯಾಗುತ್ತಿದ್ದು, ನನ್ನ ಹಣೆಯ ಬಲಭಾಗಕ್ಕೆ ಪೆಟ್ಟಾಗಿರುತ್ತದೆ. ಯಾವುದರಿಂದ ಹಲ್ಲೆ ಆಯಿತು ಎಂದು ನನಗೆ ತಿಳಿದಿಲ್ಲ. ಅನಂತರ ಸರಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಾಗಿರುತ್ತೇನೆ.

ಸಾಕ್ಷಿಗೆ ಹೇಳಿಕೆ, ಸ್ಥಳ ಪಂಚನಾಮೆಯನ್ನು ತೋರಿಸಿದ್ದು ಅದರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದ್ರಿ ದಾಖಲೆ ಆತನಿಗೆ ಓದಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಸದ್ರಿ ದಾಖಲೆಗಳನ್ನು ನಿಪಿ-1 ಮತ್ತು 2 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-1(ಎ) ಮತ್ತು ನಿಪಿ-2(ಎ) ಎಂದು ಗುರುತಿಸಲಾಯಿತು. ಒಂದು ದ್ವಿ ಚಕ್ರ ವಾಹನದ ಪೋಟೋ ತೋರಿಸಿದ್ದು ಅದನ್ನು ನೋಡಿ ಗುರುತಿಸಿಲ್ಲ. ಸ್ಥಳ ಪಂಚನಾಮೆಯ ಪೋಟೋ ತೋರಿಸಲಾಗಿದ್ದು ಅದರಲ್ಲಿ ತನ್ನನ್ನು ನೋಡಿ ಗುರುತಿಸಿಲ್ಲ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಒಡೆದ ಬೀರು ಬಾಟಲಿಯ ಚೂರುಗಳನ್ನು ನೋಡಿ ಗುರುತಿಸಿಲ್ಲ. ಅದನ್ನು ಮುಮಾ1 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ವಿರುದ್ದವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**ಪಾಟೀ ಸವಾಲು: ಮಾನ್ಯ ಸ.ಸ.ಅ.ರವರಿಂದ:**

ದಿಃ03-11-2020 ರ ಮಧ್ಯಾಹ್ನ 1 ಗಂಟೆ ಸಮಯದಲ್ಲಿ ಆರೋಪಿಯು ಮೋವಾಡಿ ಕ್ರಾಸ್ ಸಮೀಪದಲ್ಲಿರುವ ಎಸರ್ ಪೆಟ್ರೋಲ್ ಬಂಕ್ ಬದಿಯಲ್ಲಿ ದ್ವಿ ಚಕ್ರ ವಾಹನದ ಸಂಖ್ಯೆ ಕೆಎ-20-ಇಎ-5038 ಬೈಕಿನಲ್ಲಿ ಬಂದು ಅಡ್ಡಗಟ್ಟಿದ್ದು, ಅವಾಚ್ಯವಾಗಿ ನಿಂಧಿಸಿ ಬಿಯರ್ ಬಾಟಲಿಯಿಂದ ತಲೆಗೆ ಹೊಡೆದು ಗಾಯಗೊಳಿಸಿದ್ದು, ಇದಕ್ಕೂ 3 ತಿಂಗಳ ಹಿಂದೆ ಮತ್ತೊಬ್ಬ ಹುಡುಗನ ಮೇಲೆ ಹಲ್ಲೆ ಮಾಡುತ್ತಿದ್ದಾಗ ಅದನ್ನು ನಾನು ತಪ್ಪಿಸಿಲು ಮುಂದಾಗಿದ್ದೆ ಎಂಬ ದ್ವೇಷವೇ ಕಾರಣವಾಗಿರುತ್ತದೆ ಎಂದರೆ ಸರಿಯಲ್ಲ.

ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ನನ್ನನ್ನು ವಿಚಾರಿಸಿ ನಿಪಿ-1 ರಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

ದಿಃ 04-11-2020 ರಂದು ಪೊಲೀಸರು ಸ್ಥಳಕ್ಕೆ ಭೇಟಿ ನೀಡಿದ್ದು, ನಾನು ತೋರಿಸಿದ ಸ್ಥಳದಲ್ಲಿ ಚಾಸಾ-5 ಮತ್ತು 6 ರವರ ಸಮಕ್ಷಮ ಬೆಳಗ್ಗೆ 10 ರಿಂದ 10-45ರವರೆಗೆ ಪಂಚನಾಮೆ ಜರುಗಿಸಿ ಮೇಲೆ ಹೇಳಿದ ವಾಹನವನ್ನು ವಶಕ್ಕೆ ಪಡೆದು ಪೋಟೋ ತೆಗೆದು ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

ಪಿರ್ಯಾದಿಯಲ್ಲಿ ಹಲ್ಲೆಯನ್ನು ತಲವಾರಿನಿಂದ ಮಾಡಿರುವುದಾಗಿ ಹೇಳಿದ್ದು ಅನಂತರ ಸೋಡಾ ಬಾಟಲಿ ಎಂದು ಮರುಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದ್ರಿ ಮರುಹೇಳಿಕೆಯನ್ನು ನಿಪಿ-3 ಎಂದು ಗುರುತಿಸಲಾಯಿತು.

ಆರೋಪಿ ನನ್ನ ಪರಿಚಯಸ್ಥನಾದ ಕಾರಣಕ್ಕೆ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ವಾಟೀ ಸವಾಲುಃ ಆರೋಪಿತರ ಪರ ವಕೀಲರು ವಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**